ಮಿಸ್ ನಂ. 4/2019 ಪಿ ಡಬ್ಲ್ಯೂ 1

(ದಿನಾಂಕ 19-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಹೆಚ್ ಎಂ ವಕೀಲರಿಂದಃ-

ನಾನು ಶಾಲೆ ಕಲಿತಿಲ್ಲ ವಕ್ಕಲುತನ ಮಾಡುತ್ತೇನೆ. ನಾನು ಪರಮೇಶಪ್ಪನ ವಿರುದ್ದ ದಾವೆ ದಾಖಲಿಸಿದ್ದೇನೆ. ನನಗೆ ಪರಮೇಶಪ್ಪನ ಪರಿಚಯ ಇರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ಯಾರು ಹೇಳಿ ಬರೆಸಿದ್ದಾರೆಂದು ನನಗೆ ಗೊತ್ತಿಲ್ಲ. ಈ ಪ್ರಕರಣವನ್ನು ದಾಖಲಿಸಲು ನಿಮ್ಮ ವಕೀಲರಿಗೆ ಮಾಹಿತಿ ಯಾರು ನೀಡಿದ್ದರು ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ.

ಎದುರುದಾರ ಪರಮೇಶಪ್ಪ ಇವರು ನನ್ನ ಮೇಲೆ ಒಂದು ಓ ಎಸ್ ನಂ.104/2014 ರಂತೆ ದಾವೆ ದಾಖಲಿಸಿದ್ದ ಅದರಲ್ಲಿ ನನಗೆ ನೋಟೀಸ್ ಬಂದಿತ್ತು ಎಂದರೆ ಸರಿ. ಅದರಂತೆ ನಾನು ನಮ್ಮ ವಕೀಲರ ಮೂಲಕ ಸದರಿ ದಾವೆಯಲ್ಲಿ ಹಾಜರಾಗಿರುತ್ತೇನೆಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯದವರು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹಾ ನಾವು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲವೆಂದರೆ ಸಾಕ್ಷಿಯು ಆ ಸಮಯದಲ್ಲಿ ನಾವು ಕೂಲಿ ಮಾಡಲು ಬೇರೆ ಕಡೆಗೆ ಹೋಗಿದ್ದೆ, ನನಗೆ ಆ ವಿಚಾರ ಗೊತ್ತಾಗಲಿಲ್ಲವೆನ್ನುತ್ತಾರೆ. ನಾವು ಸುಮಾರು 2-3 ವರ್ಷ ಆ ರೀತಿ ಕೂಲಿ ಮಾಡಲು ಹೋಗಿದ್ದೆವು. ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸದರಿ ದಾವೆಯು ಡಿಕ್ರಿಯಾಯಿತು ಎಂದರೆ ನನಗೆ ಗೊತ್ತಿಲ್ಲ. ದಾವೆ ಡಿಕ್ರಿಯಾದ ವಿಚಾರವನ್ನು ನಮ್ಮ ವಕೀಲರು ನನಗೆ ತಿಳಿಸಿದರು.

ಸದರಿ ಡಿಕ್ರಿಯ ಪ್ರಕಾರ ಹಣ ವಸೂಲಾತಿಗಾಗಿ ಎದುರುದಾರನು ನನ್ನ ವಿರುದ್ಧ ಎಕ್ಸ ನಂ. 17/2017 ದಾಖಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಮಲ್ಜಾರಿ ಪ್ರಕರಣದಲ್ಲಿ ನಾನು ನಮ್ಮ ವಕೀಲರ ಮೂಲಕ ಹಾಜರಾಗಿರುತ್ತೇನೆಂದರೆ ಸರಿಯಲ್ಲ. ದಿಃ 03-07-2018 ರಂದು ನನ್ನ ಪರವಾಗಿ ಶ್ರೀ ಎ ವಿ ಕೆ ವಕೀಲರು ಹಾಜರಾಗಿರುತ್ತಾರೆ ಮತ್ತು ನಾನು ಸಹಾ ಹಾಜರಾಗಿದ್ದೆ ಎಂದರೆ ಸರಿ. ಈ ಅರ್ಜಿಯನ್ನು ದಾಖಲಿಸಲು ಎಷ್ಟು ದಿನ ಕಾಲವಿಳಂಬವಾಗಿದೆ ಎನ್ನುವುದರ ಬಗ್ಗೆ ಮಾಹಿತಿ ಇಲ್ಲ. ಸದರಿ ಮೂಲ ದಾವೆಯ ವಿಚಾರ ಮತ್ತು ಇ ಪಿ ಯ ವಿಚಾರ ಎಲ್ಲಾ ನಿನಗೆ ಗೊತ್ತಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪರಮೇಶಪ್ಪ ಇವರಿಗೆ ದುಡ್ಡು ಕೊಡಬೇಕಾಗುತ್ತದಂತಾ ಈ ಸುಳ್ಳು ಅರ್ಜಿ ದಾಖಲಿಸಿದ್ದೇನೆಂದರೆ ಸಾಕ್ಷಿಯು ಅವರೇ ನನ್ನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದಾರೆನ್ನುತ್ತಾರೆ.

ಮಿಸ್ ನಂ. 4/2019 ಪಿ ಡಬ್ಲ್ಯೂ 1

ಸದರಿ ಮೂಲ ದಾವೆಯಲ್ಲಿ ನಾನು ಯಾವುದೇ ತಕರಾರನ್ನು ಸಲ್ಲಿಸಿಲ್ಲ, ಸದರಿ ದಾವೆಯು ಡಿಕ್ರಿಯಾಗಿರುತ್ತದೆ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆ ದಾವೆಯಲ್ಲಿ ವಕೀಲರ ಮೂಲಕ ಹಾಜರಾಗಿರುವುದು ಸಹಾ ಸದರಿ ಅರ್ಜಿಯಲ್ಲಿ ನಾನು ಆ ದಾವೆಯಲ್ಲಿ ಏಕಪಪಕ್ಷೀಯವಾಗಿ ಉಳಿದಿದ್ದೆ ಅಂತಾ ಸುಳ್ಳು ಬರೆಸಿದ್ದೆ ಎಂದರೆ ಸರಿಯಲ್ಲ. ಈ ಅರ್ಜಿ ದಾಖಲಿಸಲು ಯಾವುದೇ ಅಧಿಕಾರ ಇಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ